## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: | 108(1171) |
| ಸದಸ್ಯರ ಹೆಸರು : | ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ) |
| ಉತ್ತರಿಸಬೇಕಾದ ದಿನಾಂಕ: | 22-09-2021 |
| ಉತ್ತರಿಸಬೇಕಾದ ಸಚಿವರ ಹೆಸರು : | ಮಾನ್ಯ ಕಂದಾಯ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಹಾಸನ ಜಿಲ್ಲೆ ವ್ಯಾಪ್ತಿಯಲ್ಲಿ ಕೈಗೊಂಡಿರುವ ಎತ್ತಿನಹೊಳೆ ನೀರಾವರಿ ಯೋಜನೆಗಳಿಗಾಗಿ ಎಷ್ಟು ಗ್ರಾಮಗಳಲ್ಲಿ ಎಷ್ಟು ಎಕರೆ ಜಮೀನನ್ನು ಭೂಸ್ವಾಧೀನ ಮಾಡಿಕೊಳ್ಳಲಾಗಿದೆ; (ಜಮೀನು ಕಳೆದುಕೊಂಡಿರುವ ಸಂತ್ರಸ್ಥರ ಹೆಸರು, ಜಮೀನಿನ ಪ್ರಮಾಣ ಮತ್ತು ಊರಿನ ವಿವರಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು) | ಹಾಸನ ಜಿಲ್ಲೆಯಲ್ಲಿ ಎತ್ತಿನಹೊಳೆ ಕುಡಿಯುವ ನೀರು ಯೋಜನೆಗಾಗಿ 92 ಗ್ರಾಮಗಳಲ್ಲಿ ಒಟ್ಟು 2558-05 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿದೆ. ಈವರೆಗೆ 91 ಗ್ರಾಮಗಳಲ್ಲಿ 2381-30¼ ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದು, 01 ಗ್ರಾಮದಲ್ಲಿ 176-14¾ ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಬಾಕಿ ಇದೆ. **(ಭೂಮಾಲೀಕರ ವಿವರವು ಅಗಾಧ ಪ್ರಮಾಣದಲ್ಲಿದ್ದು, ಮಾನ್ಯ ಶಾಸಕರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು.)** |
| ಆ) | ಈ ಯೋಜನೆಗಾಗಿ ಭೂಮಿ ಕಳೆದುಕೊಂಡಿರುವ ರೈತರಿಗೆ ಸರ್ಕಾರದಿಂದ ಪರಿಹಾರ ನೀಡಲು ಕಂದಾಯ ಇಲಾಖೆಯು ಕೈಗೊಂಡಿರುವ ಕ್ರಮಗಳೇನು; ಕಂದಾಯ ಇಲಾಖೆಯ ವಿಳಂಬ ಧೋರಣೆಗಳಿಂದ ಭೂ ಸಂತ್ರಸ್ಥರಿಗೆ ಆಗುತ್ತಿರುವ ಅನಾನುಕೂಲಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; | ಸದರಿ ಯೋಜನೆಗೆ ಈಗಾಗಲೇ ಭೂಸ್ವಾಧೀನಪಡಿಸಿಕೊಂಡ ಜಮೀನಿನ ಪೈಕಿ 755-33 ಎಕರೆ ಜಮೀನಿಗೆ ಪರಿಹಾರ ನೀಡಲು ರೂ.211,56,38,498/-ಗಳ ಮೊತ್ತದ ಐತೀರ್ಪಿಗೆ ಅನುಮೋದನೆ ನೀಡಲಾಗಿದೆ.<br><br>ಉಳಿದ 1625-37¼ ಎಕರೆ ಜಮೀನಿಗೆ ಕೋರಿಕೆ ಇಲಾಖೆಯಿಂದ ಅನುದಾನ ಬಿಡುಗಡೆಗೊಳಿಸಲು ಕ್ರಮವಹಿಸಲಾಗುತ್ತಿದ್ದು, ನಂತರ ಭೂಸಂತ್ರಸ್ಥರಿಗೆ ಪರಿಹಾರ ಪಾವತಿಸಲಾಗುವುದು. |
| ಇ) | ಬಂದಿದ್ದಲ್ಲಿ, ಈ ಯೋಜನೆಗಳ ಭೂ ಸಂತ್ರಸ್ಥರಿಗೆ ಸರ್ಕಾರದಿಂದ ಇಲ್ಲಿಯವರೆಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು; ಮತ್ತು ಎಷ್ಟು ಸಂತ್ರಸ್ಥರಿಗೆ ಪರಿಹಾರ ನೀಡಲಾಗಿದೆ; ಪರಿಹಾರ ನೀಡಿರುವ ಮೊತ್ತವೆಷ್ಟು; (ಭೂ ಸಂತ್ರಸ್ಥರ ಹೆಸರು, ಪರಿಹಾರದ ಮೊತ್ತ ಮತ್ತು ಊರಿನ ವಿವರಗಳೊಂದಿಗೆ ನೀಡುವುದು) | ಭೂಸ್ವಾಧೀನಕ್ಕಾಗಿ ಕೋರಿಕೆ ಇಲಾಖೆಯಾದ ಜಲಸಂಪನ್ಮೂಲ ಇಲಾಖೆಯಿಂದ ಒಟ್ಟು ರೂ.190.15 ಕೋಟಿಗಳು ಅನುದಾನ ಬಿಡುಗಡೆಯಾಗಿದ್ದು, ರೂ.63.00 ಕೋಟಿಗಳನ್ನು ಬಿಡುಗಡೆ ಮಾಡುವುದಾಗಿ ವಿಶ್ವೇಶ್ವರಯ್ಯ ಜಲ ನಿಗಮ ಇವರು ವಿಶೇಷ ಭೂಸ್ವಾಧೀನಾಧಿಕಾರಿ, ಎತ್ತಿನಹೊಳೆ ಯೋಜನೆ ಇವರಿಗೆ ದಿ:27-08-2021ರ ಪತ್ರದಲ್ಲಿ ತಿಳಿಸಲಾಗಿರುತ್ತದೆ.<br>ಸದರಿ ಯೋಜನೆಯಲ್ಲಿ ಇದುವರೆಗೆ ಒಟ್ಟು 150 ಭೂಮಾಲೀಕರುಗಳಿಗೆ ರೂ.47,43,85,722/-ಗಳ ಪರಿಹಾರವನ್ನು ಪಾವತಿಸಲಾಗಿದೆ. ಒಬ್ಬ ಭೂಮಾಲೀಕನು |

| | | |
|---|---|---|
| | | ಪರಿಹಾರಕ್ಕಾಗಿ ಅರ್ಜಿ ಸಲ್ಲಿಸದೇ ಜಮೀನನ್ನು ಬಿಟ್ಟು ಕೊಡದೇ ಇರುವುದರಿಂದ ರೂ.40,96,832/-ಗಳ ಮೊತ್ತವನ್ನು ಮಾನ್ಯ ನ್ಯಾಯಾಲಯದಲ್ಲಿ ಠೇವಣಿ ಇಡಲಾಗಿದೆ. **(ಭೂಮಾಲೀಕರ ವಿವರವು ಅಗಾಧ ಪ್ರಮಾಣದಲ್ಲಿದ್ದು, ಮಾನ್ಯ ಶಾಸಕರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು.)** |
| ಈ) | ಈ ಯೋಜನೆಗಳಡಿ ಇದುವರೆಗೂ ಪರಿಹಾರ ಪಡೆಯದ ಭೂ ಸಂತ್ರಸ್ಥರು ಎಷ್ಟು ಜನ; (ಭೂ ಸಂತ್ರಸ್ಥರ ಹೆಸರು, ಪರಿಹಾರದ ಮೊತ್ತ ಮತ್ತು ಊರಿನ ವಿವರಗಳನ್ನು ನೀಡುವುದು) ಇವರಿಗೆ ಪರಿಹಾರ ನೀಡಲು ವಿಳಂಬವಾಗಿರುವುದಕ್ಕೆ ಕಾರಣಗಳೇನು; ಮತ್ತು ಯಾವ ಕಾಲಮಿತಿಯೊಳಗೆ ಪರಿಹಾರ ನೀಡಲು ಕ್ರಮವಹಿಸಲಾಗುವುದು? (ಸಂಪೂರ್ಣ ವಿವರ ನೀಡುವುದು) | ಈ ಯೋಜನೆಯಡಿ 629 ಭೂಮಾಲೀಕರಿಗೆ ಪರಿಹಾರ ಪಾವತಿಸಲು ಬಾಕಿ ಇದೆ. ಈ ಪೈಕಿ 10 ಗ್ರಾಮಗಳ 315 ಭೂಮಾಲೀಕರಿಗೆ ಪರಿಹಾರ ಪಡೆಯಲು ದಾಖಲೆ ನೀಡುವಂತೆ ವಿಶೇಷ ಭೂಸ್ವಾಧೀನಾಧಿಕಾರಿ ಯವರಿಂದ ದಿನಾಂಕ:15.09.2021ರಂದು ನೋಟೀಸ್ ನೀಡಲಾಗಿರುತ್ತದೆ. ದಾಖಲೆಗಳನ್ನು ಸಲ್ಲಿಸಿದ ನಂತರ ಪರಿಹಾರ ಪಾವತಿಸಲಾಗುವುದು.<br><br>ಉಳಿಕೆ 314 ಭೂಮಾಲೀಕರ ಪೈಕಿ ಕೆಲವು ಭೂಮಾಲೀಕರು ಜಮೀನಿನ ಹಕ್ಕಿನ ಬಗ್ಗೆ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲಿಸಿದ್ದು, ಕೆಲವು ಖಾತೆದಾರರು ಪೌತಿಯಾಗಿದ್ದು ಖಾತೆ ಬದಲಾವಣೆಯಾಗಬೇಕಾಗಿರುತ್ತದೆ. ಮತ್ತು ಕೆಲವು ಭೂಮಾಲೀಕರು ದಾಖಲೆಗಳನ್ನು ಹಾಜರುಪಡಿಸದೇ ಇರುವ ಕಾರಣಗಳಿಂದ ಪರಿಹಾರ ಪಾವತಿಸಲಾಗಿರುವುದಿಲ್ಲ. **(ಭೂಮಾಲೀಕರ ವಿವರವು ಅಗಾಧ ಪ್ರಮಾಣದಲ್ಲಿದ್ದು, ಮಾನ್ಯ ಶಾಸಕರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು.)** |

ಸಂಖ್ಯೆ: ಕಂಇ 19 ಭೂಸ್ವಾಹಾ 2021

(ಆರ್.ಅಶೋಕ)
ಕಂದಾಯ ಸಚಿವರು